# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಬುಧವಾರ, ೦೩, ಏಪ್ರಿಲ್, ೨೦೨೪(ಚೈತ್ರ, ೧೪, ಶಕವರ್ಷ, ೧೯೪೬)<br>BENGALURU, WEDNESDAY, 03, APRIL, 2024(CHAITHRA , 14, SHAKAVARSHA, 1946) | ನಂ. ೨೧೭<br>No. 217 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಸಾಲಿನ ಆಯ-ವ್ಯಯದ ಭಾಷಣ ಕಂಡಿಕೆ- 391 ರಲ್ಲಿ **"ಖಾಸಗಿ ವಸತಿ ಸಮುಚ್ಚಯಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಮರುಬಳಕೆ ಮಾಡಲು ಪ್ರೋತ್ಸಾಹಿಸಲಾಗುವುದು"** ಎಂಬ ಘೋಷಣೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಅಪಜೀ 188 ಇಎನ್‌ವಿ 2003, ದಿನಾಂಕ:14.08.2003.
2. ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು ದಿನಾಂಕ:.03.2024ರಂದು ನಡೆಸಿದ ಸಭೆಯ ನಡವಳಿ.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಪರಿಸರ (ಸಂರಕ್ಷಣೆ) ಕಾಯ್ದೆ, 1986 ನಿಯಮ 5 ರ ಅಡಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕುಡಿಯುವ ನೀರನ್ನು ಬಳಸುತ್ತಿರುವ ಇತರ ಉದ್ದೇಶಿತ ಕಾರ್ಯಗಳಾದ ಉದ್ಯಾನಗಳು, ರೆಸಾರ್ಟ್‌ಗಳು ಮತ್ತು ಗಾಲ್ಫ್ ಮೈದಾನಗಳು ಒಳಗೊಂಡಂತೆ ತೋಟಗಾರಿಕೆ ಕೆಲಸಗಳಿಗೆ, ತೊಳೆಯುವುದು, ವಾಹನಗಳ ಸರ್ವಿಸಿಂಗ್ ಮತ್ತು ಸ್ವಚ್ಛಗೊಳಿಸುವುದು, ಬೆಂಗಳೂರು ನಗರದಲ್ಲಿನ ಖಾಸಗಿ ಡೆವೆಲಪರ್, ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಎಲ್ಲಾ ನಾಗರೀಕ ಕಾಮಗಾರಿ ಚಟುವಟಿಕೆಗಳಾದ ಬಹುಮಹಡಿ ಕಟ್ಟಡ, ವಾಣಿಜ್ಯ ಸಂಕೀರ್ಣ, ವಸತಿ ಸಂಕೀರ್ಣ, ಬೆಂಗಳೂರು ನಗರದಲ್ಲಿನ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿ ಕೆಲಸಗಳಿಗೆ ಮೂರನೇ ಹಂತಕ್ಕೆ ಶುದ್ಧೀಕರಿಸಿದ ನೀರನ್ನು ಮಾತ್ರ ಉಪಯೋಗಿಸುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆಗೆ ಬೆಂಗಳೂರು ನಗರದಲ್ಲಿ ಕುಡಿಯುವ ನೀರನ್ನು ಇತರ ಚಟುವಟಿಕೆಗಳಿಗೆ ಬಳಸುವುದಕ್ಕೆ ನಿರ್ಭಂಧವನ್ನು ವಿಧಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಸಭಾ ನಡವಳಿಯಲ್ಲಿ ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು ಮುಂಬರುವ ದಿನಗಳಲ್ಲಿ ಉಂಟಾಗಬಹುದಾದ ನೀರಿನ ಬವಣೆಯನ್ನು ತಪ್ಪಿಸುವ ಸಲುವಾಗಿ, ಮಾನ್ಯ ಮುಖ್ಯಮಂತ್ರಿಗಳು 2024-25ನೇ ಸಾಲಿನ ಆಯ-ವ್ಯಯದ ಭಾಷಣ ಕಂಡಿಕೆ- 391 ರಲ್ಲಿ "**ಖಾಸಗಿ ವಸತಿ ಸಮುಚ್ಚಯಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಮರುಬಳಕೆ ಮಾಡಲು ಪ್ರೋತ್ಸಾಹಿಸಲಾಗುವುದು**" ಎಂಬ ಘೋಷಣೆಯನ್ನು ಮಾಡಿರುತ್ತಾರೆ ಎಂದು ತಿಳಿಸುತ್ತಾ, ಪ್ರಸ್ತುತ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಅಂತರ್ಜಲ ಮಟ್ಟವು ಕುಸಿಯುತ್ತಿರುವ ಕಾರಣದಿಂದ ಬೆಂಗಳೂರು ನಗರದಲ್ಲಿ ಪ್ರಸ್ತುತ ನೀರಿನ ಕೊರತೆಯನ್ನು ಎದುರಿಸುತ್ತಿರುವ ಹಿನ್ನಲೆಯಲ್ಲಿ ಒಳಚರಂಡಿ ಸಂಸ್ಕರಣಾ ಘಟಕ (Sewage Treatment Plant)ಗಳಲ್ಲಿ ಸಂಸ್ಕರಿಸಿದ ನೀರನ್ನು ಮರುಬಳಕೆ ಮಾಡಲು ಅಗತ್ಯ ಕ್ರಮವನ್ನು ವಹಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಗೆ ನಿರ್ದೇಶನವನ್ನು ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಅಪಜೀ 49 ಇಎನ್‌ಜಿ 2024**
**ಬೆಂಗಳೂರು, ದಿನಾಂಕ: 03.04.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಒಳಚರಂಡಿ ಸಂಸ್ಕರಣಾ ಘಟಕ (Sewage Treatment Plant)ಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಬಳಸುವ ಸಂಬಂಧ ಈ ಕೆಳಕಂಡ ಷರತ್ತುಗಳನ್ನು ಅಳವಡಿಸಿಕೊಂಡು **ಖಾಸಗಿ ವಸತಿ ಸಮುಚ್ಚಯಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ**

**ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಮರುಬಳಕೆ ಮಾಡಲು ಅನುಮತಿಯನ್ನು ನೀಡಿದೆ.**

1. ಸಂಸ್ಕರಿಸಿದ ತ್ಯಾಜ್ಯನೀರು ಕೇಂದ್ರ / ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಈ ಕೆಳಕಂಡ ಮಾನದಂಡಗಳಿಗೆ ಅನುಗುಣವಾಗಿ ಇರಬೇಕು.

| No. | Parameter | Limits |
|---|---|---|
| 1 | pH | 6.5-8.5 |
| 2 | BOD | <10mg/L |
| 3 | COD | <50mg/L |
| 4 | TSS | <10mg/L |
| 5 | Ammoniacal Nitrogen | <5mg/L |
| 6 | Total Nitrogen | <10mg/L |
| 7 | Faecal Coliform | <100 MPN/100 ml |

No KARBIL/2001/47147 POSTAL REGN No RNP/KA/BGS/2202/2017-19
Licensed to post without prepayment WPP No. 297



2. ವಸತಿ ಸಮುಚ್ಚಯಗಳು ಕನಿಷ್ಠ 50% ರಷ್ಟು ಸಂಸ್ಕರಿಸಿದ ನೀರನ್ನು ತಮ್ಮಲ್ಲೆ ಮರುಬಳಕೆ ಮಾಡಿ ಇನ್ನುಳಿದ ನೀರನ್ನು ಮಾತ್ರ ವಾಣಿಜ್ಯ ಚಟುವಟಿಕೆಗಳ ಉಪಯೋಗಕ್ಕೆ ಬಳಸಬಹುದಾಗಿದೆ.

3. ಸಂಸ್ಕರಿತ ನೀರನ್ನು ನಿರ್ಮಾಣ, ಕೈಗಾರಿಕೆ, ತೋಟಗಾರಿಕೆ, ಅಗ್ನಿ ಶಮನ, ದೂಳು ತಗ್ಗಿಸುವಿಕೆ, ಗಣಿಗಾರಿಕೆ, ಉಪಯೋಗಕ್ಕಾಗಿ ಅಥವಾ ಸಕ್ಷಮ ಪ್ರಾಧಿಕಾರ / BWSSB ರವರ ಪೂರ್ವಾನುಮತಿಯೊಂದಿಗೆ ಅಂತರ್ಜಲದ ಮಟ್ಟವನ್ನು ವೃದ್ಧಿಗೊಳಿಸಲು ಅನುಮತಿಸಬಹುದಾಗಿರುತ್ತದೆ.

4. ಸಂಸ್ಕರಿಸಿದ ತ್ಯಾಜ್ಯ ನೀರಿನ ಬಳಕೆಯನ್ನು ಕುಡಿಯುವ ಉದ್ದೇಶಗಳಿಗಾಗಿ, ಔಷಧೀಯ ತಯಾರಿಕೆಯಲ್ಲಿ ಮತ್ತು ಆಹಾರ ಸಂಸ್ಕರಣೆಯಲ್ಲಿ ಕಟ್ಟುನಿಟ್ಟಾಗಿ ಬಳಸದಂತೆ ನಿಷೇಧಿಸಲಾಗಿದೆ.

5. ನೀರಿನ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಖರೀದಿದಾರರು ಮತ್ತು ಮಾರಾಟಗಾರರು ಇಬ್ಬರೂ ಜಂಟಿಯಾಗಿ ಜವಾಬ್ದಾರರಾಗಿರುತ್ತಾರೆ ಹಾಗೂ ಬಳಕೆದಾರರ ಜೊತೆ ಒಪ್ಪಂದ (MOU) ಮಾಡಿಕೊಳ್ಳಬೇಕಾಗಿರುತ್ತದೆ.

6. ಸಂಸ್ಕರಿಸಿದ ನೀರನ್ನು ಬಾಹ್ಯವಾಗಿ ವಿತರಿಸುವ ಅಪಾರ್ಟ್‌ಮೆಂಟ್‌ಗಳು CCTV ಕಣ್ಗಾವಲು ಸೇರಿದಂತೆ ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸಬೇಕು, ಗುಣಮಟ್ಟ ಮತ್ತು ಪ್ರಮಾಣದ ಡೇಟಾವನ್ನು ಪರೀಕ್ಷಿಸಲು ಸಮಗ್ರ ಲಾಗ್‌ಬುಕ್‌ನ ನಿರ್ವಹಣೆ ಮತ್ತು ಸಂಸ್ಕರಿಸಿದ ಗರಿಷ್ಠ 50% ರಷ್ಟು ನೀರನ್ನು ಮಾತ್ರ ಹೊರಗೆ ಕಳುಹಿಸಲು ಅನುಮತಿಯನ್ನು ನೀಡಲು ಕ್ರಮವಹಿಸುವುದು.

7. ಮರುಬಳಕೆ ನೀರು ಸಾಗಾಣಿಕೆಗೆ ಬಳಸುವ ವಾಹನಗಳ / ಟ್ಯಾಂಕರ್‌ಗಳ ಮೇಲೆ "ಮರು ಬಳಕೆ ನೀರು ಸಾಗಾಣಿಕೆ ವಾಹನ" ಎಂದು ದಪ್ಪ ಅಕ್ಷರಗಳಲ್ಲಿ ಬರೆಸತಕ್ಕದ್ದು.

ಈ ಆದೇಶವನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PDS/21/PFR/2024 ದಿನಾಂಕ:15.03.2024 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 160 ವೆಚ್ಚ-5/2024, ದಿನಾಂಕ:22.03.2024ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಿಎಸ್ 04 ಎಸ್‌ಸಿಎಂ 2024, ದಿನಾಂಕ: 03.04.2024ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ವಿಸ್ತೃತವಾದ ವರದಿಯ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ.ಎನ್. ಪ್ರವೀಣ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಜೀವಿಪರಿಸ್ಥಿತಿ ಮತ್ತು ಪರಿಸರ)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH